3

# ಪರಲೋಕವು ಮನೆಗೆ ಸಹಾಯಮಾಡಿತು

## (1 ಅರಸು 17:8-16)

ಬೈಬಲಿನಲ್ಲಿ ನಾವು ಅನೇಕ ಸಾರಿ ಉಪಯೋಗಿಸುವ ಉದಾಹರಣೆ ಬೆಂಕಿಯಲ್ಲಿ ಹಾದು ಹೋಗುವ ಸ್ಥಿತಿ, ಒಂದು ಕ್ಷಣ, ಬೆಂಕಿಯ ವಾಸನೆಯ ಬಿಳಿಹೊಗೆಯನ್ನು ಊಹಿಸಲು ಪ್ರಯತ್ನಿಸು. ಲೋಹವು ನೀರ್ಗುಳ್ಳೆಯ ಗುಂಪಿನಂತೆ ಕರಗಿದಂತೆ, ಕಲ್ಮಶವು ಮೇಲಕ್ಕೆ ಬರುತ್ತದೆ ಮತ್ತು ಮೇಲೆ ಕೆನೆಗಟ್ಟುತ್ತದೆ. ದ್ರವಲೋಹವು ಪರಿಷ್ಕೃತಗೊಳ್ಳುತ್ತದೆ, ನಂತರ ಎಣ್ಣೆ ಅಥವಾ ಉಪ್ಪು ನೀರಿನಲ್ಲಿ ಅದ್ದುತ್ತಾರೆ. ಲೋಹವು ದ್ರಾವಣದಲ್ಲಿ ಮುಳುಗಿಸಿದಾಗ, ಅದು ಪ್ರಾಣ ಸಂಕಟದಿಂದ ಚಿತ್ಕಾರಗೈಯುತ್ತದೋ ಎಂಬಂತೆ ಕಂಡುಬರುತ್ತದೆ. ಪರಿಷ್ಕರಿಸುವ ಕಾರ್ಯದ ನಂತರ ಲೋಹವು ಬಲು ಬಾಳಿಕೆಯುಳ್ಳದ್ದು, ಬಲು ಸ್ಥಿತಿಸ್ಥಾಪಕವುಳ್ಳ, ಬಳಕೆಗೆ ಬಲುಯೋಗ್ಯವುಳ್ಳದ್ದು, ಮತ್ತು ಬಲು ಬೆಲೆ ಬಾಳುವಂತದ್ದೂ ಆಗಿರುತ್ತದೆ. ಈ ವಿಷಯಕ್ಕಾಗಿ, ಅದು ಬೆಂಕಿಯ ಮೂಲಕ ಹಾದು ಹೋಗಲೇಬೇಕು.

ಇಂದು ಬೆಂಕಿಯ ಮೂಲಕ ಹಾದು ಹೋಗುವಂಥದ್ದೇನಾದರೂ ವರ್ಣಿಸಲ್ಪಡುವುದಾದೆ ಅಂದರೆ ಅದು ಮನೆಯೇ ಆಗಿದೆ. ಮನೆಯು ಹೇಗಿರ ಬೇಕೆಂದು ಬೈಬಲ ನಮಗೆ ಹೇಳುತ್ತದೆ: ಅದು ಜೀವಿತಕ್ಕಾಗಿ ಇದ್ದುಕೊಂಡು ಮದುವೆಯೆ ಅದರ ಅಡಿಪಾಯವಾಗಿರಬೇಕು (ಮತ್ತಾಯ 19:3-9); ಅದು ಪ್ರೀತಿ ಮತ್ತು ಪರಸ್ಪರ ಪ್ರೋತ್ಸಾಹದಿಂದ ಕೂಡಿರಲೇಬೇಕು (ಎಫೆಸ 5:22-33; 6:1-4). ಹೇಗೋ ಇಂದಿನ ಸಮಾಜದಲ್ಲಿ ಅವುಗಳು ಎಣಿಕೆಗೆ ಬಾರದ ಹೊರಗಿನ ಒತ್ತಡಗಳಾಗಿದ್ದು ಮನೆಯನ್ನು ನಾಶಮಾಡಲು ನಿರ್ಧರಿಸಿದಂತೆ ಕಾಣುತ್ತವೆ. ಮದುವೆಯ ಪಾವಿತ್ರತೆಯ, ಅಥವಾ ಮನೆಗೋಸ್ಕರ ಮತ್ತು ಕುಟುಂಬದ ಸಂಬಂಧಗಳಿಗೋಸ್ಕರ ಕೇವಲ ಅಲ್ಪಗೌರವವಿದೆ. ನಮ್ಮ ಜೊತೆ ಕೆಲಸಗಾರರು "ವಿಚ್ಛೇದನೆ" ಮತ್ತು "ಸ್ವಾತಂತ್ರ್ಯಗಳ" ಅದ್ಭುತವಾದ ವಿಚಾರಗಳನ್ನು ಮಾರಿಕೊಳ್ಳಲು ಪ್ರಯತ್ನಿಸಿದರು. ಮದುವೆ ಮತ್ತು ಮನೆ ಎಂಬಂತಹ ಸಂಗತಿಗಳಲ್ಲಿ ನಿಜವಾದ ಸಂಗತಿ ಎಂದರೆ, ವಾಸ್ತುರೂಪದ ಸಂಗತಿಗಳ ಮೇಲೆ ಹೆಚ್ಚು ಒತ್ತುಕೊಡಲ್ಪಟ್ಟಿದೆ. ಇದರ ಪರಿಣಾಮವು ಅಸಂತುಷ್ಟಿಯಾದ ಮನೆ, ಒಡೆದ ಮನೆ, ಪರಿತ್ಯಜಿಸಲ್ಪಟ್ಟ ಮನೆಗಳೇ ಆಗಿವೆ.

ಕೆಟ್ಟ ಸಂಗತಿಯೆಂದರೆ ಅನೇಕ ಮನೆಗಳು ಬೆಂಕಿಯ ಮೂಲಕ ಹಾದು ಹೋಗುತ್ತಿವೆ. ಒಳ್ಳೇಯ ಸುದ್ದಿಯೆಂದರೆ ಆ ಮನೆಗಳು ಬೆಂಕಿಯನ್ನು ಸಹಿಸಿಕೊಂಡು ಬಲಯುತರೂ, ಶ್ರೇಷ್ಟರೂ, ಮತ್ತು ಬಲು ಬೆಲೆಬಾಳುವವರೂ ಆಗಿರುತ್ತಾರೆ!

"ಬೆಂಕಿ" ಅಥವಾ "ಕಠಿಣ ಪರೀಕ್ಷೆ" ಇವುಗಳು ಎಲೀಯನು ದೇವರಿಂದ ಸೂಚನೆಗಾಗಿ ಕಾಯುತ್ತಿರುವ ಪಟ್ಟಣದ ಹೆಸರಾದ "ಚಾರೆಪ್ತಾದ" ಅರ್ಥ ಆಗಿದೆ. ಬಹುಶಃ ಈ ಊರಿಗೆ ಹಾಗೆ ಹೆಸರಿದ್ದ ಕಾರಣ ಅಲ್ಲಿ ಲೋಹವು ಕರಗುವಂತಹ ಕಾರ್ಖಾನೆ ಸಮೀಪ ದಲ್ಲಿರಬಹುದು. ಚಾರೆ ಪ್ತಾವು ಎಲೀಯನಿಗೆ ಬೆಂಕಿಯೂ, ಇನ್ನೂ ಎರಡು ವರ್ಷಗಳವರೆಗೆ ಬಚ್ಚಿಟ್ಟುಕೊಳ್ಳುವಿಕೆಯ ಮತ್ತು ಒಪ್ಪಿಸಿಕೊಳ್ಳವಿಕೆಗೂ, ಕಾರ್ಯರಹಿತನಾಗಿರುವುದಕ್ಕಾಗಿಯೂ ಹಾಗೆಯೇ ಆತನಿಗೆ ಪರೀಕ್ಷೆಯ ಸ್ಥಳವೂ ಆಗಿತ್ತು. ವಿಶೇಷವಾಗಿ, ಈ ಬೆಂಕಿಯು ಎಲೀಯನು ವಾಸಿಸಿದ್ದ ಚಾರೆಪ್ತಾದ ಚಿಕ್ಕ ಮನೆಯಾಗಿತ್ತು (1 ಅರಸು 17:8-34).

ಆಮೆಯ ಸಂಕಷ್ಟದ ಹೋರಾಟಗಳು ಮತ್ತು ದೇವರು ಸಹಾಯಮಾಡಿದ ರೀತಿ ಇವುಗಳನ್ನು ಕುರಿತು ನಾವು ಆ ಮನೆಯನ್ನು ಪರೀಕ್ಷಿಸೋಣ.

# ಪರಲೋಕದ ಕಾಳಜಿ

ಕೆರೀತ್ ಹಳ್ಳವು ಬತ್ತಿಹೋದ ನಂತರ ಎಲೀಯನು ಏನು ಮಾಡಿದು?

> ಆಗ ಯೆಹೋವನು ಅವನಿಗೆ, "ನೀನು ಇಲ್ಲಿಂದ ಚೀದೋನ್ಯರ ಚಾರೆಪ್ತಾ ಊರಿಗೆ ಹೊರಟು ಹೋಗಿ ಅಲ್ಲಿ ವಾಸಿಸು. ನಿನ್ನನ್ನು ಸಾಕಬೇಕೆಂದು ಅಲ್ಲಿನ ಒಬ್ಬ ವಿಧವೆಗೆ ಆಜ್ಞಾಪಿಸಿದ್ದೇನೆ" ಅಂದನು (1 ಅರಸು 17:8, 9).

ವೇದಭಾಗವು ಹೇಳುವಂತೆ, "ನಿನ್ನನ್ನು ಸಾಕಬೇಕೆಂದು ಅಲ್ಲಿನ ಒಬ್ಬ ವಿಧವೆಗೆ ಆಜ್ಞಾಪಿಸಿದ್ದೇನೆ." ಸಾಮಾನ್ಯವಾಗಿ ಇದರ ಅರ್ಥವು ಯೋಗ್ಯವಾದ ಸಿದ್ಧತೆಯು ಮಾಡಲ್ಪಟ್ಟಿತ್ತು ಎಂಬುದಾಗಿದೆ. ಹೀಗಾಗಿ, ಎಲೀಯನು ಅಲ್ಲಿಗೆ ಬರುವ ಮೊದಲೇ ಪ್ರತಿಯೊಂದೂ ಸಿದ್ಧವಾಗಿತ್ತು. ಆದರೆ ವಾಸ್ತವ ಹಾಗಿರಲಿಲ್ಲ. ಬಹುಶಃ ಇದರ ಸರಳವಾದ ಅರ್ಥವಾಗಿ ವೆನ್ನಾಗಿತ್ತೆಂದರೆ, "ನಾನು ಒಬ್ಬ ವಿಧವೆಯನ್ನು ಆರಿಸಿಕೊಂಡಿದ್ದೇನೆ ಮತ್ತು ನಿನ್ನ ಮೂಲಕ ಅವಳಿಗೆ ಆಜ್ಞಾಪಿಸುವವನಾಗಿದ್ದೇನೆ" ಎಂದಾಗಿದೆ (ಪ್ರವಾದ ನಾತ್ಮಕ ಭೂತಕಾಲವನ್ನು ಬಳಸಲಾಗಿದೆ).

ವಚನ 10 ಎಲೀಯನ ಪ್ರತಿಕ್ರಿಯಿಸುವಿಕೆಯನ್ನು ಹೇಳುತ್ತದೆ. "ಹೀಗೆ ಅವನು ಅಲ್ಲಿಂದ ಹೊರಟು ಚಾರೆಪ್ತಾದ ಊರಬಾಗಿಲಿಗೆ ಬಂದನು" ಪ್ರತಿಯೊಬ್ಬರೂ ಆತನನ್ನು ಕೊಲ್ಲುವುದಕ್ಕಾಗಿ ಹುಡುಕುತ್ತಿದ್ದಂತಹ ಸ್ಥಳದಲ್ಲಿ, ಬಾಳನ ಧರ್ಮಕ್ಕೆ ಅತಿ ಸಮೀಪವಿರುವಲ್ಲಿ ಎಲೀಯನು ವೈರಿಗಳ ಪಾಳಯವನ್ನು ದಾಟಿ ಎಪ್ಪತ್ತೈದರಿಂದ ನೂರು ಮೈಲಿಗಳವರೆಗೆ ಹೋದನು. ಚಾರೆಪ್ತಾವು ತೈರ ಮತ್ತು (ಚಿದೋನ) ಸೀದೋನಗಳ ಮಧ್ಯದ ಸಮುದ್ರದ ದಂಡೆಯ ಪ್ರದೇಶವಾಗಿತ್ತು. ಚಾರೆಪ್ತಾ ದಿಂದ ಕಾಲ್ನಡಿಗೆಯಿಂದ ಕೇವಲ ಹದಿನೈದು ನಿಮಿಷಗಳ ಹಾದಿಯನ್ನು ನಡೆದಿದ್ದಾದರೆ ಆತನು ಇಜೆಬೇಲಳ ತವರು ಮನೆಯಾದ ಚಿದೋನನನ್ನು ನೋಡಬಹುದಿತ್ತು. ಆದರೆ ಎಲೀಯನು ಯಾವುದೇ ರೀತಿವಾದವನ್ನು ಮಾಡಲಿಲ್ಲ, ಆತನು ಹೊರಟು ಹೋದನು.

"ಚಾರಪ್ತದ ಊರಬಾಗಿಲಿನ ಸಮೀಪಕ್ಕೆ ಬಂದಾಗ ಸೌದೆಯನ್ನು ಕೂಡಿಸುತ್ತಿರುವ ವಿಧವೆಯನ್ನು ಕಂಡನು" (ವಚನ 10ಬಿ). ಎಲೀಯನು ಇದನ್ನೆ ತಾನು ಎದುರು ನೋಡು ತ್ತಿರುವ ಸಂಗತಿ ಎಂದು ಹೇಗೆ ಕಂಡುಕೊಂಡನು? ಬಹುಶಃ ಕೆಲ ದಿವ್ಯ ಸಂದೇಶಗಳಿಂದ ಇರಬೇಕು, ಹಾಗೂ ಬಹುಶಃ ಆಕೆಯ ವಿಧವೆಯ ವೇಷದಿಂದಲೂ[1] ಇರಬಹುದು ಮತ್ತು ಆತನು ಕೊಟ್ಟ ಪರೀಕ್ಷೆಯಿಂದಲೂ ಇರಬಹುದು. ಏನೇ ಇರಲಿ, ಎಲೀಯನು ಪಟ್ಟಣಕ್ಕೆ ಬಂದಾಗ ಮೊದಲು ಕಂಡದ್ದು ಆತನನ್ನು ನೋಡಿಕೊಳ್ಳಲು ದೇವರು ಸಿದ್ಧಮಾಡಿದ ವ್ಯಕ್ತಿಯನ್ನು, ದೇವರ ವ್ಯವಸ್ಥೆಗಳು ಅದ್ಭುತವಾದವುಗಳಲ್ಲವೇ?

ವಿಧವೆಯು ಏನು ಮಾಡುತ್ತಿದ್ದಾಳೆ?

> ಸೌದೆಯನ್ನು ಕೂಡಿಸುತ್ತಿರುವ ಒಬ್ಬ ವಿಧವೆಯನ್ನು ಕಂಡನು "... ನನ್ನ ಹತ್ತಿರ ರೊಟ್ಟಿ ಯಿರುವುದಿಲ್ಲ. ಮಡಕೆಯಲ್ಲಿ ಒಂದು ಹಿಡಿ ಹಿಟ್ಟು, ಮೊಗೆಯಲ್ಲಿ ಸ್ವಲ್ಪಎಣ್ಣೆ ಇವುಗಳ ಹೊರತಾಗಿ ಬೇರೇನೂ ಇರುವುದಿಲ್ಲ. ಈಗ ಎರಡು ಕಟ್ಟಿಗೆಗಳನ್ನು ಹೆಕ್ಕಿ ನನಗೋ ಸ್ಕರವೂ ನನ್ನ ಮಗನಿಗೋಸ್ಕರವೂ ರೊಟ್ಟಿಮಾಡುತ್ತೇನೆ. ಅದನ್ನು ತಿಂದ ಮೇಲೆ ನಾವು ಸಾಯಬೇಕೇ ಹೊರತು ಬೇರೆ ಗತಿಯಿಲ್ಲ" ಎಂದು ಉತ್ತರ ಕೊಟ್ಟಳು (ವಚನಗಳು 10ಸಿ, 12).

ದೇವರು ಚಾರೆಪ್ತಾದಲ್ಲಿನ ನೀರನ್ನೂ ಸಹ ನಿಲ್ಲಿಸಿಬಿಟ್ಟಿದ್ದನು (ವಚನ 14). ಕೆಲ (ಲೌಕಿಕ) ಬರಹಗಾರರು ಬರವು ಫೋಯನಿಕದವರೆಗೂ ತಲುಪಿತು ಎಂದು ಸಾಕ್ಷ್ಯನುಡಿಯುತ್ತಾರೆ. ಫೋಯನಿಕವು ಕೆಟ್ಟತನದ ಮೂಲವಾಗಿದ್ದು ಇಸ್ರಾಯೇಲನ್ನು ಭ್ರಷ್ಟವನ್ನಾಗಿ ಮಾಡಿತ್ತು; ಕಷ್ಟಪಡುವುದರಲ್ಲಿ ಅದೂ ಕೂಡ ಅದರಲ್ಲಿ ಸೇರಿಕೊಂಡಿತ್ತು.

ವಿಧವೆಯು ಸಾಯಲೆಂದು ಕಟ್ಟಿಗೆಗಳನ್ನು ಕೂಡಿಸುತ್ತಿದ್ದಳು. ಯಾರಿಗಾಗಿ ಅವಳು ಕಟ್ಟಿಗೆಯನ್ನು ಆರಿಸುತ್ತಿದ್ದಳೋ ಆ ಮಗನು ಎಲ್ಲಿದ್ದಾನೆ? ಆಕೆಯ ಹಿಂತಿರುಗುವಿಕೆಗಾಗಿ ಕಾಯುತ್ತಾ ಆತನು ಮಂಕುಕವಿದವನಂತೆ ಮಲಗಿರಬಹುದು. ಈ ಭೂಮಿಯ ಮೇಲೆ ಇದು ಬಹುಶಃ ಕೊನೆಯ ದಿನವಾಗುತ್ತದೇನೋ ಎಂಬುದು ಅವಳ ಮನದಲ್ಲಿರಬಹುದು.

ಎಲೀಯನು ಚಾರೆಪ್ತಾಕ್ಕೆ ಹೋಗಲು ಎಪ್ಪತ್ತೈದರಿಂದ ನೂರು ಮೈಲಿಗಳ ಮಧ್ಯದ ಅಪಾಯಕಾರಿ ಹಾಗೂ ಹೃದಯವಿದ್ರಾವಕ ಪ್ರಯಾಣವನ್ನು ಮಾಡಿದ್ದಾನೆ. ಅಲ್ಲಿ ತಲುಪಿದೊಡನೆ, ಅದು ಊಹಿಸಿದ್ದಕ್ಕಿಂತಲೂ ಬಲುಕೆಟ್ಟದ್ದಾಗಿತ್ತು. ನೀವು ಎಂದಾದರೂ ಬೇರೆಡೆಗೆ ಹೋಗಲು ಅಥವಾ ಹೊಸದೊಂದು ಶಾಲೆಗೆ ಹೋಗಲು ಅಥವಾ ಹೊಸ ಕೆಲಸ ಪ್ರಾರಂಭಿಸಲು ಮತ್ತು ಯಾವುದೇ ವಿಪರೀತ ಪರಿಸ್ಥಿತಿಯನ್ನು ಎದುರಿಸಲು ಸಿದ್ಧತೆಯನ್ನು ಮಾಡಿಕೊಂಡಿದ್ದೇನೆ ಎಂದು ಎಂದಾದರೂ ಯೋಚಿಸಿಕೊಂಡು ಎಂದಾದರೂ ಹೋಗಿದ್ದಿದೆಯಾ? ನಿಮಗೆ ನೀವೇ "ಇದು ಬಹಳ ಕೆಟ್ಟದ್ದಾಗಿದೆ!" ಅಂದು ಕೊಂಡಿದ್ದೀರಾ. ನೀವು ಅಲ್ಲಿ ತಲುಪಿದಾಗ, ಅದು ನೀವು ಊಹಿಸಿದುದಕ್ಕಿಂತಲೂ ಕೆಟ್ಟದ್ದಾಗಿರುತ್ತದೆ.

ಎಲೀಯವರೇ, ಚಾರೆಪ್ತಾಕ್ಕೆ ಸ್ವಾಗತ!

ಹೇಗೂ, ವಿಧವೆಯೆಡೆಗೆ ನಮ್ಮ ಗಮನವನ್ನು ಹರಿಸೋಣ. ನನ್ನ ಊಹೆಯೆನೆಂದರೆ ಅವಳು ಇನ್ನೂ ಯೌವನಸ್ಥೆಯಾಗಿದ್ದಾಳೆ. ನಾವು ನೋಡುವಂತೆ, ಅವಳ ಮಗನು ಇನ್ನೂ ಕೈಗಳಲ್ಲಿ ಎತ್ತಿಕೊಳ್ಳುವಷ್ಟು ಚಿಕ್ಕವನಿದ್ದಾನೆ.[2] ಆ ದಿನಗಳಲ್ಲಿ ಸ್ತ್ರೀಯರು ಸಾಮಾನ್ಯವಾಗಿ ಬೇಗನೇ ವಿವಾಹವಾಗುತ್ತಿದ್ದರು ಮತ್ತು ಇನ್ನೂ ಯೌವನಸ್ಥರಾಗಿರುವಾಗಲೇ ಮಕ್ಕಳನ್ನು ಪಡೆಯುತ್ತಿದ್ದರು.

ನಾನು ಅವಳನ್ನು ಜೀವಕಳೆ ತುಂಬಿದ ಒಬ್ಬ ಹುಡುಗಿಯಾಗಿ ನೋಡಿದೆನು. ಅವಳು ಮದುವೆಯಾದಳು ಮತ್ತು ಸುಂದರ ಮಗನನ್ನು ಪಡೆದವಳು. ಜೀವನವೆಲ್ಲಾ ಅವಳ ಮುಂದೆ ಇದೆ. ಆಗ ದುರಂತವು ಬಂದಪ್ಪಳಿಸಿತು. ಅವಳ ಗಂಡನು ಸತ್ತು ಹೋದನು, ಜೀವನದ ಮೂಲವು ಕಡಿದುಹೋಯಿತು. ಮನೆಯಲ್ಲಿ ದುಡಿಯುವವರಿಲ್ಲದೇ ಅವಳು ಮಗುವಿನೊಂದಿಗೆ ಲಕ್ಷಕೊಡುವವರಿಲ್ಲದೇ ಬಿಡಲ್ಪಟ್ಟಳು. ನಂತರ ಬರಗಾಲವು ಬಂದಿತು. ಅವಳು ಅಲ್ಪವನ್ನು ಉಳಿಸಿಕೊಂಡಿದ್ದಳು. ಇದ್ದಂತಹ ಪದಾರ್ಥಗಳನ್ನು ದಿನದಿಂದ ದಿನಕ್ಕೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಬಳಿಸುತ್ತಾ ಹೋದಳು. ಈಗ ಹಿಡಿಹಿಟ್ಟು ಮೊಗೆಯಲ್ಲಿನ ಅಲ್ಪ ಎಣ್ಣೆಯನ್ನು ಬಿಟ್ಟರೆ ಬೇರೆ ಎಲ್ಲವೂ ಮುಗಿದಿತು. ಅವಳು ಯೌವನಸ್ಥಳಾಗಿದ್ದಾಗಲೂ ಸಹ ವೃದ್ಧೆಯಂತೆ ಕಾಣುತ್ತಿದ್ದಳು. ಅವಳು ಬಿಳುಚಿಕೊಂಡಿದ್ದು, ಅವಳ ಕೆನ್ನೆಗಳು ಗುಳಿ ಬಿದ್ದಿದ್ದವು. ಅವಳ ಮುಖಚರ್ಯೆಯು ಕಳೆಗುಂದಿತ್ತು, ಮತ್ತು ಅವಳ ಕೈಗಳ ಎಲುಬುಗಳು ಚರ್ಮವನ್ನು ಹೊದಿಸಿಕೊಂಡಂತಿತ್ತು. ಅವಳಿಗೆ ಯಾವ ನಿರೀಕ್ಷೆಯೂ ಇರಲಿಲ್ಲ; ಅವಳು ಸಾಯಲು ಸಿದ್ಧವಾಗುತ್ತಿದ್ದಳು.

ಪರಲೋಕವು ಇದೆಲ್ಲವನ್ನೂ ತಿಳಿದಿತ್ತು ಮತ್ತು ಪರಲೋಕವು ಕಾಳಜಿ ಮಾಡುವುದಾಗಿದೆ: *ಈ ಸತ್ಯವನ್ನು ಒತ್ತಿ ಹೇಳುವಲ್ಲಿ ಒಂದು ನಿಲುಗಡೆಯನ್ನು ಕೊಡೋಣ!*

ಹಳೆಯ ಮತ್ತು ಹೊಸ ಒಡಂಬಡಿಕೆ ಎರಡರುದ್ದಕ್ಕೂ ವಿಧವೆಗೋಸ್ಕರ ಆಕಾಶದ ಆಸಕ್ತಿವಹಿಸುವಿಕೆಯ ಮೇಲೆ ಶ್ರೇಷ್ಟವಾದ ಒತ್ತಿ ಹೇಳುವಕೆಯು ಇದೆ. ವಿಮೋಚನಕಾಂಡ 22:22ರಲ್ಲಿ ಆಜ್ಞಾಪಿಸುವದೇನೆಂದರೆ, "ವಿಧವೆಯರನ್ನಾಗಲಿ ದಿಕ್ಕಿಲ್ಲದ ಮಕ್ಕಳನ್ನಾಗಲಿ ಬಾಧಿಸಬಾರದು" ಎಂಬ ಆಜ್ಞೆಯು ಇದೆ. ಧರ್ಮೋಪದೇಶಕಾಂಡ 14, 16, 24 ಮತ್ತು 26ನೇ ಅಧ್ಯಾಯಗಳಲ್ಲಿ ಪರದೇಶಿಗಳಿಗೂ, ಅನಾಥರಿಗೂ, ವಿಧವೆಯರಿಗೂ ವಿಶೇಷವಾದ ವ್ಯವಸ್ಥೆಯು ಮಾಡಿರುವುದನ್ನು ಕಾಣುತ್ತೇವೆ. ನಾಯಿನೆಂಬ ಊರಿನಲ್ಲಿ ಒಬ್ಬ ವಿಧವೆಯು ತನ್ನ ಮಗನನ್ನು ಕಳೆದುಕೊಂಡಾಗ ಯೇಸು ಅವಳಿಗೆ ಕರುಣೆಯನ್ನು ತೋರಿದ್ದನ್ನು ನೆನಿಪಿಸಿಕೊಳ್ಳಿರಿ (ಲೂಕ 7). "ಅವಳು ವಿಧವೆಯಾಗಿದ್ದಳು" (ವಚನ 12) ಈ ಮಾತುಗಳಲ್ಲಿ ಇಡೀ ಕಥೆಯಲ್ಲಿನ

ಹೆಚ್ಚಿನವುಗಳು ತುಂಬಿಸಲ್ಪಟ್ಟಿದೆ. ಯಾಕೋಬ 1:27ರಲ್ಲಿ ಬರಹಗಾರನು ಹೇಳುವ ಹಾಗೆ ಶುದ್ಧವೂ ಮತ್ತು ಮಾಲಿನ್ಯಗೊಳ್ಳದ ಧರ್ಮದ ಅತ್ಯವಶ್ಯಕವಾದ ಭಾಗವು ಎಂದರೆ "ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಂಬರಿಸಬೇಕು."

ಪರಲೋಕವು ಎಲ್ಲಾ ವಿಧವೆಯರಲ್ಲಿ ಆಸಕ್ತವಾಗಿರಲಿಲ್ಲ, ಬದಲಾಗಿ ಪರಲೋಕವು ವಿಶೇಷವಾಗಿ ಈ ವಿಧವೆಯ ಬಗ್ಗೆ ಕಾಳಜಿಯನ್ನು ಹೊಂದಿತ್ತು. 1 ಅರಸು 17ರಲ್ಲಿ ನಮಗೆ ಕೊಡಲಾಗದಂತಹ ಅಂತರ್ ದೃಷ್ಟಿಯು ಲೂಕ 4 ರಲ್ಲಿ ನಮಗೆ ಕೊಡಲಾಗಿದೆ. ಯೇಸು ಕಪೆರ್ನೌಮಿನಲ್ಲಿ ಅದ್ಭುತಗಳನ್ನು ಮಾಡಬೇಕೆಂಬ ಸವಾಲನ್ನು ಹೊಂದಲ್ಪಟ್ಟನು. ಅದಕ್ಕೆ ಪ್ರತಿಯಾಗಿ ಆ ಅದ್ಭುತಗಳು ವಿಚಾರಹೀನತೆಯಿಂದ ಮಾಡಲ್ಪಟ್ಟವುಗಳಲ್ಲ, ಆದರೆ ಆಯ್ದ ವಿಶೇಷ ಉದ್ದೇಶಗಳಿಗಾಗಿವೆ. ನಂತರ ಈ ಮಾತುಗಳಲ್ಲಿ ಆತನು ಉದಾಹರಿಸುವವನಾಗಿದ್ದಾನೆ:

> "ನಿಮಗೆ ಸತ್ಯವಾಗಿ ಹೇಳುತ್ತೇನೆ. ಕೇಳಿರಿ, ಎಲೀಯನ ಕಾಲದಲ್ಲಿ ಮೂರು ವರುಷ ಆರು ತಿಂಗಳು ಮಳೆಬಾರದೆ ದೇಶದೆಲ್ಲೆಲ್ಲಾ ದೊಡ್ಡಬರ ಉಂಟಾದಾಗ ಇಸ್ರಾಯೇಲ್ ಜನರಲ್ಲಿ ಎಷ್ಟೋ ಮಂದಿ ವಿಧವೆಯರು ಇದ್ದದ್ದು ನಿಜ: ಆದರೆ ಅವರಲ್ಲಿ ಒಬ್ಬರ ಬಳಿಗೂ ದೇವರು ಎಲೀಯನನ್ನು ಕಳುಹಿಸದೆ ಸೀದೋನ್ ದೇಶಕ್ಕೆ ಸೇರಿದ ಸರೆಪ್ತ ಊರಿನಲ್ಲಿದ್ದ ಒಬ್ಬ ವಿಧವೆಯ ಬಳಿಗೆ ಮಾತ್ರ ಕಳುಹಿಸಿದನು" (ಲೂಕ 4:25, 26).

ಎಲೀಯನು ಚಾರೆಪ್ತಾಕ್ಕೆ ಕಳುಹಿಸಲ್ಪಟ್ಟದ್ದು ಕೇವಲ ಎಲೀಯನಿಗೆ ಸಹಾಯಮಾಡುವುದಕ್ಕಾಗಿ ಅಲ್ಲ, ಬದಲಾಗಿ ನಿಶ್ಚಿತವಾದ ಆ ವಿಧವೆಗೆ ಸಹಾಯ ಮಾಡುವುದಕ್ಕಾಗಿಯೂ ಸಹ ಎಂದು ಯೇಸು ಹೇಳಿದನು. ದೇವರು ಆಕೆಯನ್ನು ಆರಿಸಿಕೊಂಡನು. ದೇವರು ಆಕೆಯ ಕಷ್ಟಗಳನ್ನು ತಿಳಿದಿದ್ದನು. ದೇವರು ಆಕೆಗೆ ಸಹಾಯ ಮಾಡಲು ಬಯಸಿದ್ದನು.

ನಿಮ್ಮ ಮನೆಯಲ್ಲಿ ಈಗ ಸಧ್ಯ ಯಾವ ಸಮಸ್ಯೆಯ ಮೂಲಕ ಸಾಗುತ್ತಿದ್ದೀರಿ ಎಂಬುದನ್ನು ನಾನರಿಯೆನು. ಅದರ ಅರ್ಥ ಬಹುಶಃ ನೀನು ಒಬ್ಬ ಕ್ರೈಸ್ತ ಹೆಂಡತಿಯಾಗಿ ಅಥವಾ ಗಂಡನಾಗಿ, ಒಬ್ಬ ಕ್ರೈಸ್ತ ತಂದೆಯಾಗಿ ಅಥವಾ ತಾಯಿಯಾಗಿ ಅದರೊಡನೆ ಹೋರಾಡುತ್ತಿರುವಿ. ಘೋರವಾದ ಒತ್ತಡದ ಮಧ್ಯದಲ್ಲಿರುವಾಗ ಯಾರೊಬ್ಬರೂ ನಮ್ಮನ್ನು ಅರ್ಥೈಸಿಕೊಳ್ಳುವುದಿಲ್ಲ, ನೀನು ನಿನ್ನ ಆಧ್ಯತೆಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿರುವೆ. ಹೀಗೆ ಅದು ನಿನಗೆ ನಿನ್ನ ಸಮಯದಲ್ಲಿ, ಸಾಮರ್ಥ್ಯದಲ್ಲಿ ನಿನ್ನ ಸಂಗಾತಿಗೆ ಅಥವಾ ನಿಮ್ಮ ಮಕ್ಕಳಿಗೆ ಸಮರ್ಪಿಸಬಹುದಾಗಿದೆ. ಬಹುಶಃ ನಿನ್ನ ಮತ್ತು ನಿನ್ನ ಸಂಗಾತಿಯ ಮಧ್ಯದ ಸಂಬಂಧವು ಹದಗೆಟ್ಟಿದ್ದು ಹಾಗೂ ಅಲ್ಪಮಾತ್ರವಾದ ಕಾಗದದ ಮತ್ತು ಸರ್ವಶಕ್ತ ದೇವರ ಮುಂದೆ ನೀನು ಕೊಟ್ಟ ಮಾತು ಮಾತ್ರ ನಿಮ್ಮ ಮಧ್ಯೆಯಿರಬಹುದು. ಅಷ್ಟೇ ಅಲ್ಲ, ದೇವರ ಕುಟುಂಬದೊಂದಿಗಿನ ನಿನ್ನ ಇರುವಿಕೆಯನ್ನು ಕತ್ತರಿಸಿ ಹಾಕುವಂತಹ ಕೆಲ ಒತ್ತಡಗಳು ನಿನ್ನ ಮನೆಯಲ್ಲಿ ಇರಬಹುದು.

ಬಹುಶಃ ವಾರಗಳಿಂದ ಅಥವಾ ತಿಂಗಳುಗಳಿಂದ ಇಟ್ಟಿರುವ ಬಿಲ್ಲುಗಳನ್ನು ನೀನು ಹೊಂದಿರಬಹುದು, ಮತ್ತು ನಿನ್ನ ತಲೆಯ ಮೇಲೆ ಸೂರನ್ನು ಹೇಗೆ ಕಟ್ಟಿಕೊಳ್ಳಬೇಕೆಂದು ಮತ್ತು ನಿನ್ನ ಮೇಜಿನ ಮೇಲೆ ಆಹಾರ ಹೇಗೆ ತರಬೇಕೆಂದು ನಿನಗೆ ತಿಳಿಯದಾಗಿರಬಹುದು. ಅನಾರೋಗ್ಯವೂ ಕೂಡಾ ಮನೆಯ ಎಲ್ಲಾ ಸಂಬಂಧಗಳ ಮೇಲೆ ನೋವನ್ನು ಹಾಕುವಂತದ್ದಾಗಿದೆ. ಬಹುಶಃ ನೀವು ನೋವನ್ನು ಉಂಡಿದ್ದೀರಿ. ಹೀಗೆಯೇ ಆ ಘಾಯವು ಎಂದಿಗೂ ಮಾಯದೆಂದು ನೀವು ಆಳವಾಗಿ ಚಿಂತಿಸುತ್ತಿರಬಹುದು. ನೀವು ನಿಮ್ಮ ಯೌವನಸ್ಥರ ಜೊತೆ ಕ್ರಿಸ್ತೀಯ ರೀತಿಯಲ್ಲಿ ಹೇಗೆ ಸರಿಯಾದ ರೀತಿಯಲ್ಲಿ ವ್ಯವಹರಿಸ ಬೇಕೆಂಬ ಯೋಚನೆಯ ಅಂತ್ಯದಲ್ಲಿ ನೀವು ಇದ್ದಿರಬಹುದು. ಬಹುಶಃ ನೀವು ನಿಮ್ಮ ಬೆಳದ ಮಕ್ಕಳಿಗಾಗಿ ಕಣ್ಣೀರೇ ಉಳಿಯದಷ್ಟು ಈಗಾಗಲೇ ಸಾಕಷ್ಟು ಕಣ್ಣೀರನ್ನು ಸುರಿಸಿದ್ದೀರಿ ಎಂದು

ನೀವು ಯೋಚಿಸಬಹುದು. ಎಲ್ಲಿಯೂ ಯಾರೂ ನಿಮಗೇನು ಅನ್ನಿಸುತ್ತದೋ ಮತ್ತು ನೀನು ಯಾವುದರ ಮೂಲಕ ಸಾಗುತ್ತಿದ್ದೀರಿ ಎಂಬುದನ್ನು ಅರ್ಥ ಮಾಡಿಕೊಳ್ಳಲಾರರು ಎಂದು ನೀವು ಚಿಂತಿಸಬಹುದು.

ಹೀಗಿದ್ದಾಗ ದೇವರು ಅದನ್ನು ಬಲ್ಲವನಾಗಿದ್ದಾನೆ, ದೇವರು ಅದನ್ನು ಅರಿತು ಕೊಳ್ಳುತ್ತಾನೆ, ದೇವರ ಅದನ್ನು ಗಮನಿಸುತ್ತಾನೆ ಎಂಬುದು ಅದ್ಭುತವಾದದ್ದು ಎಂದು ಅರಿತುಕೊಳ್ಳಬಹುದಲ್ಲವೇ?

## ಪರಲೋಕದ ಶರತ್ತುಗಳು

ಈಗ ಪರಲೋಕದ ಶರತ್ತುಗಳನ್ನು ಪರಿಗಣಿಸೋಣ. ಪರಲೋಕವು ನಿನಗೆ ಸಹಾಯಮಾಡಬೇಕೆಂದು ಬಯಸುವುದಾಗಿದೆ, ಆದರೆ ಪರಲೋಕವು ನಿಶ್ಚಿತವಾದ ತರದ ಮನೆಗೆ ಮಾತ್ರ ಸಹಾಯಮಾಡುವುದಾಗಿದೆ. ಲೂಕ 4 ಹೇಳುವುದೇನೆಂದರೆ ದೇಶದಲ್ಲಿನ ಎಲ್ಲಾ ವಿಧವೆಯರಿಗಿಂತಲೂ ಈ ವಿಧವೆಯನ್ನು ಮಾತ್ರ ದೇವರು ಆರಿಸಿಕೊಂಡನು ಎಂದು (ವಚನಗಳು 25, 26). ಬಹುಶಃ ದೇವರು ಈ ತೀರ್ಮಾನವನ್ನು ಏಕಪಕ್ಷೀಯ ವಾಗಿ ತೆಗೆದು ಕೊಂಡಿರಬಹುದು ಆದರೆ ಆತನ ಆಯ್ಕೆಯು ಯಾವಾಗಲೂ ಆತನ ಗುಣದ ಆಧಾರವಾಗಿರುತ್ತದೆ ಮತ್ತು ಇದು ಈ ಪ್ರಕರಣದಲ್ಲಿಯೂ ಸತ್ಯದ ಸಂಗತಿಯಾಗಿದೆ. ನಮ್ಮ ವೇದಭಾಗದಲ್ಲಿ ಚಿತ್ರಿತವಾಗಿರುವ ಈ ತರದ ಮನೆಯನ್ನು ಗಮನಿಸಿರಿ:

ಮೊದಲು, ಅದೊಂದು ಕೊಡುವ ಮನೆಯಾಗಿತ್ತು.

ಎಲೀಯನು ಆಕೆಗೆ "ನನಗೆ ಕುಡಿಯಲು ಒಂದು ತಂಬಿಗೆ ನೀರನ್ನು ಕೊಡು" ಎಂದನು (1 ಅರಸು 17:10), ಮತ್ತು ಆ ವಿಧವೆಯು ಅದನ್ನು ತರಲು ಒಳಗೆ ಹೋದಳು (ವಚನ 11). ಅವಳು ಸಾಯುತ್ತಿದ್ದಳು, ಆದರೆ ಇಲ್ಲಿ ಒಬ್ಬ ಮನುಷ್ಯನು ಅರಣ್ಯವನ್ನು ಪ್ರದೇಶವನ್ನು ದಾಟಿ ಬಲು ದೂರ ಪ್ರಯಾಣಮಾಡಿ ಧೂಳುಮಯವಾಗಿದ್ದಾನೆ. ಆಕೆಯು ಆತನಿಗೆ ನೀರನ್ನು ಕೊಡಲು ನಿರಾಕರಿಸಲಿಲ್ಲ.

ಕೆಲವು ಮನೆಗಳು ಇಂಥ ವಾತಾವರಣವನ್ನು ಹೊಂದಿರುತ್ತವೆ; ಇನ್ನು ಕೆಲವು ಇಂಥ ವಾತಾವರಣವನ್ನು ಕೊಡುವಂತವುಗಳಾಗಿರುತ್ತವೆ.

ಬಹುಶಃ ಯೇಸುವು ಕೂಡಾ ಪ್ರವಾದನೆಗಳನ್ನು ಪಡೆಯುವುದರ ಬಗ್ಗೆ ಮಾತನಾಡುವಾಗ ಈ ವಿದವೆಯನ್ನು ತನ್ನ ಮನದಲ್ಲಿ ಇಟ್ಟುಕೊಂಡಿರಬೇಕು.

> "ಪ್ರವಾದಿಯನ್ನು ಪ್ರವಾದಿಯೆಂದು ಸೇರಿಸಿಕೊಳ್ಳುವವನು ಪ್ರವಾದಿಗೆ ಬರತಕ್ಕ ಫಲವನ್ನು ಹೊಂದುವನು; ... ಮತ್ತು ಈ ಚಿಕ್ಕವರಲ್ಲಿ ಒಬ್ಬನಿಗೆ ಯೇಸುವಿನ ಶಿಷ್ಯನೆಂದು ಯಾವನಾದರೂ ಒಂದು *ತಂಬಿಗೆ ತಣ್ಣೀರನ್ನಾದರೂ ಕುಡಿಯುವುದಕ್ಕೆ ಕೊಟ್ಟರೆ* ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 10:41, 42) ಎಂದನು.

ಎರಡನೆಯದಾಗಿ ಆ ಮನೆಯು ನಂಬಿಕೆಯ ಮನೆಯಾಗಿತ್ತು.

ಎಲೀಯನು ಆ ವಿಧವೆಗೆ ರೊಟ್ಟಿಯನ್ನು ತರಲು ಹೇಳಿದಾಗ ಆಕೆಯು "*ನಿನ್ನ ದೇವರಾದ ಯೆಹೋವನಾಣೆ* ನನ್ನ ಹತ್ತಿರ ರೊಟ್ಟಿಯಿರುವುದಿಲ್ಲ" ಅಂದಳು (ವಚನ 12; ಒತ್ತಿ ಹೇಳಿದ್ದು ನನ್ನದು). "ಕರ್ತನು" ಎಂಬ ಪದವು ದೇವರ ಪವಿತ್ರ ಹೆಸರಿನಿಂದ ಭಾಷಾಂತರವಾದದ್ದು ಆಗಿದೆ. ಚಾರೆಪ್ತಾವು ಕಾನಾನಿನಲ್ಲಿ ಇರದೇ ಇದ್ದದರಿಂದ, ಅದು ಹತ್ತಿರದಲ್ಲಿಯೇ ಇತ್ತು, ಮತ್ತು ಮೂಲನಿವಾಸಿಗಳು ಇಸ್ರಾಯೇಲ್ಯರ ದೇವರಿಂದ ನಿರ್ಲಕ್ಷಕ್ಕೆ ಒಳಗಾಗಿರಲಿಲ್ಲ. ನಂತರದಲ್ಲಿ ಆಕೆಯು ಎಲೀಯನು ತನಗೆ ಏನನ್ನು ಮಾಡಲು ಹೇಳಿದನೋ ಅದನ್ನು ಮಾಡಿದಳು, ಯಾಕೆಂದರೆ ಇದು ಆಕೆಗೆ ದೇವರು ಮಾಡಿದ ಆಜ್ಞೆಯಾಗಿತ್ತು ಎಂದು ಆತನು ಪುರಾವೆಗಳಿಂದ

ಹೇಳಿದನು. ಆ ವಿಷಯದಲ್ಲಿ ಲವಲೇಶವೂ ಸಂಶಯ ಪಡದಂತ ನಂಬಿಕೆ ಅವಳದ್ದಾಗಿತ್ತು, ಆದರೆ ಅವಳಿಗೆ ಅವಳ ಜೀವಿತವನ್ನು ಇಡಲು ಮತ್ತು ನಿಜದೇವರ ಕೈಯಲ್ಲಿ ಅವಳ ಮಗನ ಜೀವಿತವನ್ನು ಸಮರ್ಪಿಸಲು ಇದು ಸಂತೃಪ್ತಕರವಾದುದ್ದಾಗಿತ್ತು.

ಯೇಸುವಿನ ವೈಯಕ್ತಿಕ ಸೇವೆಯ ಆರಂಭದಲ್ಲಿ, ಆತನು ಸಾಮಾನ್ಯವಾಗಿ ಈ ವಿಧವೆಯು ವಾಸಿಸುತ್ತಿದ್ದ ಚಾರೆಪ್ತಾ ಪಟ್ಟಣಕ್ಕೂ ಪ್ರಯಾಣಿಸಿದ್ದನು. ಅನ್ಯಜನಾಂಗದ ಸ್ತ್ರೀಯು ಯೇಸುವಿನ ಹತ್ತಿರಕ್ಕೆ ಬಂದು, "ಸ್ವಾಮಿ, ದಾವೀದನ ಕುಮಾರನೇ, ನನ್ನನ್ನು ಕರುಣಿಸು, ನನ್ನ ಮಗಳಿಗೆ ದೆವ್ವದ ಕಾಟ ಬಹಳವಾಗಿದೆ" ಎಂದು ಅತ್ತಳು (ಮತ್ತಾಯ 15:22). ಯೇಸು ಅವಳಿಗೆ ಉತ್ತರಿಸಲಿಲ್ಲ, ಮತ್ತು ಶಿಷ್ಯರು ಆಕೆಯನ್ನು ದೂರಕ್ಕೆ ಕಳುಹಿಸಲು ಪ್ರಯತ್ನ ಪಟ್ಟರು; ಆದರೆ ಅವಳು ನಿರಂತರವಾಗಿ ತನ್ನ ಮಗಳಿಗಾಗಿ ಬೇಡುವುದನ್ನು ಮುಂದುವರೆಸಿದಳು "ಸ್ವಾಮಿ ಅನುಗ್ರಹ ಮಾಡಬೇಕು" (ವಚನ 25) ಎಂದು ಹೇಳಿದಳು. ಅಂತಿಮವಾಗಿ ಯೇಸುವು ಅವಳನ್ನು ಅವಹೇಳನ ಮಾಡುವಂತೆ ಕಾಣುತ್ತಾನೆ, ಆದರೆ ಅವಳು ಅದಕ್ಕೆ ಪ್ರತಿಯಾಗಿ ಉತ್ತರಿಸುತ್ತಾ "ಯಜಮಾನರ ಮೇಜಿನಿಂದ ಬಿಳುವ ರೊಟ್ಟಿ ತುಂಡುಗಳನ್ನು ನಾನು ಕೇಳುತ್ತಿದ್ದೇನೆ" ಅಂದಳು (ವಚನಗಳು 26, 27). ನಂತರ ಯೇಸು ಆಕೆಗೆ ಉತ್ತರಿಸುತ್ತಾ ಹೇಳಿದನು. "ಅಮ್ಮ, *ನಿನ್ನ ನಂಬಿಕೆಯು ಬಹಳ*, ನಿನ್ನ ಮನಸ್ಸಿನಂತೆ ಆಗಲಿ" ಅಂದನು (ವಚನ 28; ಒತ್ತಿ ಹೇಳಿದ್ದು ನನ್ನದು). ಈ ದೇಶದಲ್ಲಿ ನಿಜ ದೇವರ ಮೇಲೆ ನಂಬಿಕೆಯಿಡುವದು ಹೇಗೆ ವೃದ್ಧಿಯಾಯಿತು ಎಂಬುದನ್ನು ನಾನರಿಯೆನು, ಆದರೆ ಈ ಸ್ತ್ರೀಯಲ್ಲಿ ಅದು ಅಸ್ತಿತ್ವವನ್ನು ಹೊಂದಿತ್ತು ಅದೇ ಚಾರೆಪ್ತಾದ ವಿಧವೆಯಲ್ಲಿಯೂ ಕೂಡ ಇತ್ತು.

ಇಂದು ನಮಗೆ ನಂಬಿಕೆಯ ಮನೆಗಳು ಇನ್ನೂ ಬೇಕಾಗಿವೆ. ಕೀರ್ತನೆಗಾರನು ಹೇಳುವಂತೆ, "ನಿನ್ನ ಭೂಯಾತ್ರೆಯ ಚಿಂತೆಯನ್ನು ಕರ್ತನಿಗೆ ವಹಿಸಿಬಿಟ್ಟು ಭರವಸದಿಂದಿರು, ಆತನೇ ಅದನ್ನು ಸಾಗಿಸುವನು" (ಕೀರ್ತನೆ 37:5).

ಮೂರನೆಯದಾಗಿ, ಇದು ವಿಧೇಯತ್ವದ ಮನೆಯಾಗಿತ್ತು.

ಎಲೀಯು ನೀರಿಗೋಸ್ಕರ ಕೇಳಿದನು. ನಂತರದಲ್ಲಿ ನಾವು ಹೀಗೆ ಓದುತ್ತೇವೆ:

> ಆಕೆಯು ಹೋಗುತ್ತಿರುವಾಗ ತಿರುಗಿ ಆಕೆಯನ್ನು ಕರೆದು ನೀನು ಬರುವಾಗ ನನಗೋಸ್ಕರ ಒಂದು ತುಂಡು ರೊಟ್ಟಿಯನ್ನು ತೆಗೆದುಕೊಂಡು ಬಾ ಅಂದನು. ಆಕೆಯು ಅವನಿಗೆ ನಿನ್ನ ದೇವರಾದ ಯೆಹೋವನಾಣೆ, ನನ್ನ ಹತ್ತಿರ ರೊಟ್ಟಿಯಿರುವುದಿಲ್ಲ. ಮಡಿಕೆಯಲ್ಲಿ ಒಂದು ಹಿಡಿ ಹಿಟ್ಟು, ಮೊಗೆಯಲ್ಲಿ ಸ್ವಲ್ಪ ಎಣ್ಣೆ ಇವುಗಳು ಹೊರತಾಗಿ ಬೇರೇನೂ ಇರುವುದಿಲ್ಲ. ಈಗ ಎರಡು ಕಟ್ಟಿಗೆಗಳನ್ನು ಹೆಕ್ಕಿ ನನಗೋಸ್ಕರವೂ ನನ್ನ ಮಗನಿಗೋಸ್ಕರವೂ ರೊಟ್ಟಿ ಮಾಡುತ್ತೇನೆ. ಅದನ್ನು ತಿಂದ ಮೇಲೆ ನಾವು ಸಾಯ ಬೇಕೇ ಹೊರತು ಬೇರೆ ಗತಿಯಿಲ್ಲ ಎಂದು ಉತ್ತರಕೊಟ್ಟಳು. ಆಗ ಎಲೀಯನು ಆಕೆಗೆ - "ಹೆದರಬೇಡ; ನೀನು ಹೇಳಿದಂತೆ ಮಾಡು, ಆದರೆ ಮೊದಲು ಅದರಿಂದ ನನಗೋಸ್ಕರ ಒಂದು ಚಿಕ್ಕ ರೊಟ್ಟಿಯನ್ನು ಮಾಡಿಕೊಂಡು ಬಾ; ತರುವಾಯ ನಿನಗೂ ನಿನ್ನ ಮಗನಿಗೂ ಮಾಡಿಕೋ. ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ - ನಾನು ದೇಶಕ್ಕೆ ಮಳೆಯನ್ನು ಕಳುಹಿಸುವವರೆಗೆ ನಿನ್ನ ಮಡಿಕೆಯಲ್ಲಿರುವ ಹಿಟ್ಟು ತೀರುವುದಿಲ್ಲ, ಮೊಗೆಯಲ್ಲಿರುವ ಎಣ್ಣೆಯು ಮುಗಿದು ಹೋಗುವುದಿಲ್ಲ ಎಂದು ಹೇಳುತ್ತಾನೆ" ಅಂದನು. ಆಕೆಯು ಹೋಗಿ ಅವನು ಹೇಳಿದಂತೆಯೇ ಮಾಡಿದಳು; ಆಕೆಯೂ ಆಕೆಯ ಮನೆಯವರೂ ಎಲೀಯನೂ ಅದನ್ನು ಅನೇಕ ದಿವಸಗಳವರೆಗೆ ಊಟಮಾಡಿದರು. ಯೆಹೋವನು ಎಲೀಯನ ಮುಖಾಂತರವಾಗಿ ಹೇಳಿದಂತೆ ಮಡಕೆಯಲ್ಲಿದ್ದ ಹಿಟ್ಟು ತೀರಲಿಲ್ಲ. ಮೊಗೆಯಲ್ಲಿರುವ ಎಣ್ಣೆಯು ಮುಗಿದುಹೋಗುವುದಿಲ್ಲ ಎಂದು ಹೇಳುತ್ತಾನೆ ಅಂದನು. ಆಕೆಯು ಹೋಗಿ ಅವನು ಹೇಳಿಂತೆಯೇ ಮಾಡಿದಳು; ಆಕೆಯೂ ಆಕೆಯ ಮನೆವರೂ ಎಲೀಯನೂ ಅದನ್ನು ಅನೇಕ ದಿನಗಳವರೆಗೆ ಊಟಮಾಡಿದರು. ಯೆಹೋವನು ಎಲೀಯನ ಮುಖಾಂತರವಾಗಿ ಹೇಳಿದಂತೆಯೇ ಮಡಿಕೆಯಲ್ಲಿದ್ದ ಹಿಟ್ಟು ತೀರಲಿಲ್ಲ; ಮೊಗೆಯಲ್ಲಿದ್ದ

ಎಣ್ಣೆಯು ಮುಗಿದು ಹೋಗಲಿಲ್ಲ (ವಚನಗಳು 11-15).

ಇದನ್ನು ಅರ್ಥೈಸಿಕೊಳ್ಳುವುದಕ್ಕಾಗಿ, ಇಡೀ ಚಿತ್ರವನ್ನು ನೋಡುವದು ನಮಗೆ ಅವಶ್ಯವಿದೆ. ವಿಧವೆಯ ಯೆಹೂದಿ ಮತಸ್ಥಳಲ್ಲ ("ನಿನ್ನ ದೇವರಾದ ಯೋವನಾಣೆ" ಎಂಬ ಪದವನ್ನು ಗಮನಿಸಿರಿ). ಈಗ ಇಲ್ಲಿ ಕಾಣಿಸಿಕೊಂಡ ಒಬ್ಬ ಮನುಷ್ಯನು ಪ್ರವಾದಿಯ ಬಟ್ಟೆಯನ್ನು ಧರಿಸಿದ್ದಾನೆ. ಆತನು ಮಾಡಿದ ಮೊದಲ ಕೆಲಸವೆಂದರೆ ಅವಳ ಮಡಿಕೆ ಕುಡಿಕೆಗಳತ್ತಲಿನ ಅವಳ ದೃಷ್ಟಿಯನ್ನು ತೆಗೆದುಬಿಡುವ ಸವಾಲನ್ನು ಹಾಕುವದು ಮತ್ತು ದೇವರೆಡೆಗೆ ದೃಷ್ಟಿಸುವದೇ ಆಗಿತ್ತು. ಮಾನುಷ ರೀತಿಯ ಮೂಲಕ, ಪ್ರಾಣಿಯಂತೆ ಕಾಣುವ ಈ ಮನುಷ್ಯನು ಹೇಳಿ ದುದನ್ನು ಮಾಡಲು ಸಾಧ್ಯವೇ ಇಲ್ಲ. ಆದಾಗ್ಯೂ, ಆಕೆಯು ಆತನು ಹೇಳಿದು ದನ್ನು ಮಾಡಿದಳು. ಅವಳು ವಿಧೇಯಳಾದಳು.

ಇಂದು ನಾವು ದೇವರ ಚಿತ್ತಾನುಸಾರ ಅರ್ಪಿಸಿಕೊಂಡಂಥಹ ಮನೆಗಳು ಇಂದಿನ ಅವಶ್ಯಕತೆಯಲ್ಲವೇ ನಾಲ್ಕನೆಯದಾಗಿ, ಇದು ನಿಸ್ವಾರ್ಥವಾದ ಮನೆಯಾಗಿತ್ತು!

ಇದು ನಿಸ್ವಾರ್ಥವಾದುದಾಗಿದೆ ಎಂದು ಹೇಳುವ ಮೂಲಕ ನಾವು ಈ ಚಿಕ್ಕ ಮನೆಯ ವಿಶೇಷಗುಣಗಳನ್ನು ಸಾರಾಂಶೀಕರಿಸಬಹುದು. ಜೆ. ಆರ್ ಮ್ಯಾಕ್‌ಡಫ್, "ತಮ್ಮ ಬೆಂಕಿಯ ಪ್ರವಾದಿಯಾದ ಎಲೀಯ" ಎಂಬ ಉತ್ಕೃಷ್ಟವಾದ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ. "ನಂಬಿಕೆ ಮತ್ತು ನಿಸ್ವಾರ್ಥತನದ ಸಂಯೋಗದೊಡನೆ ಕೆಲ ಹೋಲಿಕೆಗಳನ್ನು ವೇದಭಾಗವು ಹೊಂದಿದೆ. ಅವಳು ಎಲೀಯನ ವಿನಂತಿಗೆ ವಿಧೇಯಳಾಗುವಲ್ಲಿ, ಆತನ ಬಳಲಿಕೆಯಿಂದ ಬಿಡುಗಡೆಗೊಳಿಸಲು, ಮತ್ತು ಅವಳ ಕಪಾಟಿನಲ್ಲಿದ್ದ ಕೊನೆಯ ಅತ್ಯಲ್ಪವಾದದ್ದನ್ನು ಹಂಚಿಕೊಳ್ಳಲು ಆತನಿಗೆ ಅನುಮತಿ ನೀಡಿಸುದರಲ್ಲಿ ಆಕೆಯು ಅವಸರಿದಳು."[3]

ಈ ವೇದಾಭಾಗದಲ್ಲಿರುವ ಇನ್ನೊಬ್ಬ ವಿಧವೆಯನ್ನು ನೆನಪು ಮಾಡಿಕೊಳ್ಳುತ್ತೇವೆ: ಮಾರ್ಕ 12ರಲ್ಲಿನ ಈ ವಿಧವೆಯು ಎರಡು ಕಾಸನ್ನು ಅಂದರೆ ಒಂದು ದುಗ್ಗಾಣಿಯನ್ನು ಕರ್ತನಿಗಾಗಿ ಹಾಕಿದಳು, ಇಂದು ನಾವು ಸಾಯಕ್ಕಾಗಿ ಕೇಳುತ್ತಿರುವಾಗ, ಕೊಡಲಾದ ಕೆಲ ಸೌಲಭ್ಯಗಳಿಗಾಗಿ ನಾವು ಸಿಡುಕುವವರಾಗಿದ್ದೇವೆ, ಆದರೆ ಈ ವಿಧವೆ ಮತ್ತು ಚಾರೆಪ್ತಾದ ವಿಧವೆ ತಾವು ಹೊಂದಿದೆಲ್ಲವನ್ನೂ ಕೊಟ್ಟುಬಿಟ್ಟರು.

ನಿಸ್ವಾರ್ಥದ ಸಂಗತಿಯು ಎಂಥ ಮಹತ್ವವಾದದ್ದು! ಸ್ವಾರ್ಥದ ಬಗೆಗೆ ಚಿಂತಿಸದ ಇಂಥ ಹೆಚ್ಚಾದ ನ್ಸ್ವಾರ್ಥ ಮನೆಗಳನ್ನು ನಾವು ಹೊಂದಿದ್ದಾದರೆ ದೇವರು ಅವುಗಳನ್ನು ಆಶೀರ್ವದಸುವವನಾಗಿದ್ದಾನೆ, ಆದರೆ ಆ ಮನೆಯಲ್ಲಿರುವ ಇತರರ ಬಗೆಗೆ, ಆ ಮನೆಯಲ್ಲಿ ತಮಗಿಂತ ಹೆಚ್ಚಾಗಿ ಇತರರು ಹೆಚ್ಚು ಮಹತ್ವಹೊಂದಿದವರು ಎಂದು ಇತರ ಬಗೆಗೆ ದೀನ ಭಾವನೆಯನ್ನು ಹೊಂದಿರುವ ಹೆಚ್ಚು ಮನೆಗಳಿವೆ (ಫಿಲಿಪ್ಪಿ 2:3); ಇದರಲ್ಲಿ ಹೆಚ್ಚಿನ ಮನೆಗಳು ಇತರ ಸಂತೋಷದ ಬಗೆಗೆ ಗಮನವಹಸುವವುಗಳಾಗಿವೆ!

## ಪರಲೋಕದ ಬದ್ಧತೆ

ಎಲೀಯನು ಚಾರೆಪ್ತಾದ ವಿಧವೆಗೆ ಮೊದಲು ಆತನಿಗೆ ರೊಟ್ಟಿಯನ್ನು ಮಾಡಲು ಹೇಳು ವಾಗ, ಆತನು ಅವಳಿಗೆ "ದೇವರಾದ ಯೆಹೋವನು ನಿನಗೆ - ನಾನು ದೇಶಕ್ಕೆ ಮಳೆಯನ್ನು ಕಳಿಸುವವರೆಗೆ ನಿನ್ನ ಮಡಿಕೆಯಲ್ಲಿರುವ ಹಿಟ್ಟು ತೀರುವುದಿಲ್ಲ, ಮೊಗೆಯಲ್ಲಿರುವ ಎಣ್ಣೆಯು ಮುಗಿದುಹೋಗುವುದಿಲ್ಲ ಎಂದು ಹೇಳತ್ತಾನೆ" (1 ಅರಸು 17:14) ಎಂದು ಹೇಳಿದನು. "ಅದು ಆಕೆಗೆ ಪರಲೋಕದ ಬಾಧ್ಯತೆಯಾಗಿತ್ತು. ದೇವರು ಈ ಬಾಧ್ಯತೆಯನ್ನು ಗೌರವಿಸಿದನೇ?" ನಾವು 15 ಮತ್ತು 16ನೇ ವಚನಗಳನ್ನು ಓದುವುದನ್ನು ಮುಂದುವರೆಸೋಣ:

ಆಕೆಯು ಹೋಗಿ ಅವನು ಹೇಳಿದಂತೆಯೇ ಮಾಡಿದಳು; ಆಕೆಯು ಹೋಗಿ ಅವನು ಹೇಳಿದಂತೆಯೇ ಮಾಡಿದಳು; ಆಕೆಯೂ ಆಕೆಯ ಮನೆಯವರೂ ಎಲೀಯನೂ

> ಅದನ್ನು ಅನೇಕ ದಿನಗಳವರೆಗೆ ಊಟಮಾಡಿದರು. ಯೆಹೋವನು ಎಲೀಯನ ಮುಖಾಂತರವಾಗಿ ಹೇಳಿದಂತೆಯೇ ಮಡಿಕೆಯಲ್ಲಿದ್ದ ಹಿಟ್ಟು ತೀರಲಿಲ್ಲ; ಮೊಗೆಯಲ್ಲಿದ್ದ ಎಣ್ಣೆಯೂ ಮುಗಿದುಹೋಗಲಿಲ್ಲ.

ಪ್ರತಿದಿನ ಅವರು ಆ ಮಡಿಕೆಯನ್ನು ಖಾಲಿ ಮಾಡುತ್ತಿದ್ದರು ಮತ್ತು ಮೊಗೆಯಲ್ಲಿದ್ದರು. ಮರುದಿನ ಅಲ್ಲಿ ಆ ದಿನಕ್ಕೆ ಸಾಕಾಗುವಷ್ಟು ಹೆಚ್ಚಿನದಿರುತ್ತಿತ್ತು. ಆ ದಿನ ಆ ಮಡಿಕೆ ಮತ್ತು ಮೊಗೆಗಳು ಖಾಲಿಯಾಗುತ್ತಿದ್ದವು, ಆದರೆ ಮರುದಿನ ಅಲ್ಲಿ ಆ ದಿನಕ್ಕೆ ಸಾಕಾದುವಷ್ಟಿರುತ್ತಿತ್ತು. ಅಲ್ಲಿ ಕೇವಲ ಒಂದೇ ಅದ್ಭುತಕಾರ್ಯವಿರಲಿಲ್ಲ; ಅಲ್ಲಿ ಪ್ರತಿದಿನ ಅದ್ಭುತಕಾರ್ಯವಿರುತ್ತಿತ್ತು. ಈ ಚಿಕ್ಕ ಮನೆಯ ಮೇಲೆ ಪರಲೋಕವ ಎಷ್ಟು ಆಶೀರ್ವಾದಗಳನ್ನು ಸುರಿಸಿತ್ತು!

ನಿಜ, ಅಲ್ಲಿ ಯಾವ ಹೆಚ್ಚಿನ ವೈವಿಧ್ಯತೆಯು ಇರಲಿಲ್ಲ. ಹಿಟ್ಟು ಮತ್ತು ಎಣ್ಣೆಯಿಂದ ನೀವು ಏನೇನು ಮಾಡಬಲ್ಲಿರಿ?

ಬಿಸ್ಕಿಟ್‌ಗಳು. ಅವರು ಬಿಸ್ಕಿಟ್‌ಗಳನ್ನು ಮತ್ತು ನೀರನ್ನು ಮುಂಜಾನೆಯ ತಿಂಡಿಗಾಗಿ ತಿಂದರು, ಬಿಸ್ಕಿಟ್‌ಗಳನ್ನು ಮತ್ತು ನೀರನ್ನು, ರಾತ್ರಿಯ ಊಟಕ್ಕಾಗಿ ತಿಂದರು. ಯುರೋಪಿನಲ್ಲಿ 5-10ಗೆ ಒಂದು ದಿನ[4] ಎಂಬ ಪುಸ್ತಕದಲ್ಲಿ ಬಳಸಿದಂತೆ ನಮ್ಮ ಕುಟುಂಬವು 1973ರಲ್ಲಿ ಯುರೋಪಿನಲ್ಲಿ ನಾಲ್ವತ್ತೈದು ದಿನಗಳ ಪ್ರಯಾಣದಲ್ಲಿರುವಾಗ ಇದ್ದ ಆಹಾರಕ್ರಮವನ್ನು ನಾನು ನೆನಪಿಸಿಕೊಳ್ಳುತ್ತೇನೆ. ನಾವು ಚೀಸ್, ಹಣ್ಣುಗಳು, ಮತ್ತು ಬ್ರೆಡ್‌ಗಳ ಅಳತೆಯನ್ನು ಕಡಿಮೆಗೊಳಿಸಿದೆವು. ಪ್ರಯಾಣವು ಮುಗಿಯುವ ಮುನ್ನವೇ, ನನ್ನ ಮೂರು ಯೌವನಸ್ಥ ಹೆಣ್ಣು ಮಕ್ಕಳು ಒಂದು ಹಾಡನ್ನು ರಚಿಸಿದರು. "ಮುಂಜಾನೆಯಲ್ಲಿ ಚೀಸ್, ಸಾಯಂಕಾಲದಲ್ಲಿ ಚೀಸ್ ರಾತ್ರಿಯ ಊಟದಲ್ಲಿ ಚೀಸ್"[5]

ಅಲ್ಲಿ ಅಷ್ಟೊಂದು ವೈವಿಧ್ಯತೆಯು ಇರದಿದ್ದರೂ, ವಿಧವೆಯು ಆ ಆಶೀರ್ವಾದವನ್ನು ಪ್ರಶಂಶಿಸುವುದನ್ನು ಮರೆತಳು ಎಂದು ಭಾವಿಸುತ್ತೀರಾ? ಅವಳ ಮುಖವು ಯೌವನಸ್ಥಮಯತೆಯನ್ನು ಮತ್ತು ಅರಳುವಿಕೆಯನ್ನು ಮರಳಿಪಡೆದಿರುವುದನ್ನು ಊಹಿಸಿಕೊಳ್ಳಿರಿ. ಎಲ್ಲಕ್ಕಿಂತ ಹೆಚ್ಚಾಗಿ, ಅವಳು ತನ್ನ ಮಗನೆಡೆಗೆ ನೋಡುವುದನ್ನು ಊಹಿಸಿಕೊಳ್ಳಿರಿ, ಈಗ ಆತನು ಬಲಯುತನೂ ಆರೋಗ್ಯಯುತನೂ ಆಗಿದ್ದಾನೆ. ಸೂರ್ಯನ ಕಿರಣದಲ್ಲಿ ಆತನು ನಗುತ್ತಿದ್ದಾನೆ ಮತ್ತು ಆಡುತ್ತಿದ್ದಾನೆ. ಆ ಬಿಸ್ಕಿಟ್‌ಗಳು ಅವಳನ್ನು ಹುರಿದುಂಬಿಸುವಂತೆ ಮತ್ತು ಹಾಡುವಂತೆ ಚಿತ್ರಿಸಿರಿ:

> ಯೆಹೋವನು ನನ್ನನ್ನು ಪ್ರೀತಿಸುತ್ತಾನೆ!
> ಇದನ್ನು ನಾನು ಅರಿತಿದ್ದೇನೆ,
> ಆ ಬಿಸ್ಕಿಟ್‌ಗಳಿಗಾಗಿ
> ಹಾಗೇ ನನಗೆ ಹೇಳಿರಿ.[6]

ನಮಗೆ ಬೇಕಾದುದನ್ನು ಪಡಿದುಕೊಳ್ಳುವದು ದೊಡ್ಡ ಆಶೀರ್ವಾದವಲ್ಲ ಆದರೆ ನಮಗೆ ಅತ್ಯವಶ್ಯ ಇರುವುದನ್ನು ಪಡೆದುಕೊಳ್ಳುವದು ನಿಜವಾಗಿಯೂ ಆಶೀರ್ವಾದವಾಗಿದೆ.

ನಾವು ಮಾತನಾಡುತ್ತಿರುವಂತಹ ಕ್ರೈಸ್ತರಲ್ಲಿ ನೀನೂ ಒಬ್ಬನಾಗಿದ್ದರೆ ಮತ್ತು ನಾವು ನಂಬಿಕೆಯಿಂದ ಕೊಡುವ ಕರುಣೆಯುಳ್ಳ ಮನುಷ್ಯನು ಆಗಿದ್ದರೆ, ಒಬ್ಬ ವಿಧೇಯತ್ವವುಳ್ಳ ಒಬ್ಬ ನಿಸ್ವಾರ್ಥ ವ್ಯಕ್ತಿಯೂ ಆಗಿದ್ದೇವೆ - ದೇವರೂ ಸಹ ಕೆಲ ನಿಶ್ಚಿತ ಒಡಂಬಡಿಕೆಗಳನ್ನು ನಿನಗೂ ನಿನ್ನ ಮನೆಗೂ ಮಾಡುವವನಾಗಿದ್ದಾನೆ. ಲೂಕ 6:35, 38 ನ್ನು ಗಮನಿಸಿರಿ:

> "... ಅವರಿಗೆ ಉಪಕಾರ ಮಾಡಿರಿ. ಧೈರ್ಯವನ್ನು ಬಿಡದೆ ಸಾಲಕೊಡಿರಿ; ಹೀಗೆ ಮಾಡಿದರೆ, ನಿಮಗೆ ಬಹಳ ಫಲ ಸಿಕ್ಕುವದು, ಮತ್ತು ಪರಾತ್ಪರನ ಮಕ್ಕಳಾಗುವಿರಿ ... ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ

ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು."

ಚಾರೆಪ್ತಾದ ವಿಧವೆಗೆ ಮಾಡಿದ ವಾಗ್ದಾನವನ್ನು ಇದು ಹೋಲುವುದಿಲ್ಲವೇ? ನಾವು ನೋಡಿದಂತೆ, ದೇವರು ಆ ವಾಗ್ದಾನವನ್ನು ಪರಿಪಾಲಿಸಿದನು. ಈಗ ಯೇಸು ಹೇಳುತ್ತಾನೆ. "ನಾನು ನಿನಗೂ ಅದೇ ರೀತಿಯ ವಾಗ್ದಾನವನ್ನು ಮಾಡುತ್ತೇನೆ ಎಂದನು!"

ಇದಕ್ಕೆ ಸಮಾನವಾದ ವಾಗ್ದಾನವನ್ನು ಮತ್ತಾಯ 25ರಲ್ಲಿ ಕಾಣುತ್ತೇವೆ. ವಚನ 34ರಲ್ಲಿ, ಯೇಸು ತನ್ನ ಬಲಭಾಗದಲ್ಲಿರುವವರಿಗೆ "ನನ್ನ ತಂದೆಯ ಆಶೀರ್ವಾದವನ್ನು ಹೊಂದಿರುವವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" ಎಂದು ಹೇಳುತ್ತಾನೆ. ಅವು ಯಾಕೆ ಇಷ್ಟೊಂದು ಆಶೀರ್ವಾದ ಹೊಂದುವವರು? ಇದಕ್ಕೆ ಒಂದು ಕಾರಣ ವಚನ 35ರಲ್ಲಿ ಕೊಡಲ್ಪಟ್ಟಿದೆ: ನಾನು ಹಸಿದಿದ್ದೆನು; ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು ನನಗೆ ಕುಡಿಯುವುದಕ್ಕೆ ಕೊಟ್ಟಿರಿ. ವಚನ 40ರಲ್ಲಿ ಯೇಸು ವಿವರಿಸುತ್ತಾ, "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು" ಎಂದು ಹೇಳುತ್ತಾನೆ.

ಯೇಸುವು ಮನೆಯ ದಿನನಿತ್ಯದ ಅವಶ್ಯಕತೆಗಳ ಬಗೆಗಿನ ವಾಗ್ದಾನಗಳನ್ನು ವಿಸ್ತಾರಗೊಳಿಸುತ್ತಾನೆ: "ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವುಗಳೂ ನಿಮಗೆ ದೊರಕುವವು" (ಮತ್ತಾಯ 6:33). ಈ ಸಂದರ್ಭದಲ್ಲಿ "ಅವೆಲ್ಲವುಗಳು' ಎಂಬುದು ಆಹಾರ, ನೀರು, ಬಟ್ಟೆ, ಜೀವ ನಾವಶ್ಯಕ ಸಂಗತಿಗಳನ್ನು ಸೂಚಿಸುವವುಗಳಾಗಿ ನಿನಗೆ ಬೇಕಾದೆಲ್ಲವುಗಳನ್ನು ನೀನು ಹೊಂದಿಲ್ಲದಿರಬಹುದು, ಆದರೆ ನಿನಗೆ ಅವಶ್ಯಕವಾದದ್ದನ್ನು ನೀನು ಹೊಂದಿದ್ದೀ.

ಇಂದು ನಮಗೋಸ್ಕರ ದೇವರ ಒದಗಿಸುವಿಕೆಯು ಚಾರೆಪ್ತಾದ ವಿಧವೆಗೋಸ್ಕರ ಇದ್ದಂತ ಅದ್ಭುತೀಯವಾಗಿ ಅಲ್ಲ. ಸೃಷ್ಟಿಯ ನಂತರ, ಮಾನವರ ಇತಿಹಾಸದ ಅವಧಿಯಲ್ಲಿ ಮೂರು ದೊಡ್ಡ ಅದ್ಭುತಗಳು ಇವೆ; ಅದರಲ್ಲಿ ಒಂದು ಎಲೀಯನ ಮತ್ತು ಆತನ ಸೇವಕನಾದ ಎಲೀಷನ ಸಮಯದಲ್ಲಿ ಇದ್ದುದು. ಇದರ ಅರ್ಥ ದೇವರು ಉಳಿದ ಸಮಯದಲ್ಲಿ ಕಾರ್ಯಶೂನ್ಯನಾಗಿದ್ದನು ಎಂದರ್ಥವಲ್ಲ. ಉಳಿದ ಸಮಯದಲ್ಲಿ ಆತನು ದೈವಿಕತ್ವದಿಂದ ಕೆಲಸಮಾಡಿದನು, ಆತನು ಸೃಷ್ಟಿಸಿದ ಜಗತ್ತಿನ ಮೂಲಕ, ತನ್ನ ಅದನ್ನು ಜನರಿಗೋಸ್ಕರ ಒದಗಿಸಿದನು. ಹಾಗಿದ್ದಾಗ್ಯೂ, ದೇವರು ಇಂದಿಗೂ ಇನ್ನೂ ಕಾರ್ಯಮಾಡುತ್ತಲೇ ಇದ್ದಾನೆ, ಅದ್ಭುತಕಾರ್ಯಗಳಿಂದಲ್ಲ, ಬದಲಾಗಿ ದೈವಿಕತ್ವದಿಂದ ಇಂದು ದೇವರು ಅದ್ಭುತೀಯ ವಾಗಿ ಕಾರ್ಯಮಾಡದಿದ್ದಾಗಲೂ ಕೂಡಾ, ಆತನು ತನ್ನ ಜನರಿಗೆ ಒದಗಿಸುತ್ತಾನೆ ಮತ್ತು ಒದಗಿಸುವನು. ಆತನು ತನ್ನನ್ನು ತಾನು ಈ ರೀತಿಯಲ್ಲಿ ಒಪ್ಪಿಸಿಕೊಂಡಿದ್ದಾನೆ!

"ನೀನಂತು ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು, ನಿನಗೆ ಸಹಾಯಕೊಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರಮಾಡುತ್ತೇನೆ" (ಯೆಶಾಯ 41:10).

## ಮುಕ್ತಾಯ

ಚಾರೆಪ್ತಾದ ವಿಧವೆಯ ಕಥೆಯಿಂದ ನಮ್ಮಲ್ಲಿ ಪ್ರತಿಯೊಬ್ಬರು ವೈಯಕ್ತಿಕವಾಗಿ ಅದನ್ನು ಅನ್ವಯಿಸಿಕೊಳ್ಳುವಾ. ದೇವರು ಪ್ರತಿಯೊಬ್ಬರನ್ನೂ ಆಶೀರ್ವದಿಸ ಬಯಸಿದ್ದಾನೆ. ಹೇಗೋ ಒಂದು ವೇಳೆ ದೇವರು ನಮ್ಮನ್ನು ಆಶೀರ್ವದಿಸ ಬಯಸಿದ್ದರೆ ನಾವು *ವಿಧೇಯರಾಗಿರಬೇಕು.* "ನೀವು ನನ್ನನ್ನು ಸ್ವಾಮಿ, ಸ್ವಾಮಿ ಅಂತ ಕರೆದು ನಾನು ಹೇಳುವುದನ್ನು ನಡಿಸದೇ ಇರುವುದೇ ಕೇ?" (ಲೂಕ 6:46) ಎಂದು ಹೇಳುತ್ತಾನೆ. ದೇವರು ನಿನ್ನನ್ನು ಆಶೀರ್ವದಿಸಿದಾಗ ನಿನ್ನ

ಜೀವಿತವು ಈ ತರಹದ ಜೀವಿತವಾಗಿರುತ್ತದೆಯೋ?

---

ಟಿಪ್ಪಣಿಗಳು

[1]ನೋಡಿ ಆದಿಕಾಂಡ 34:14, 19; ಧರ್ಮೋಪದೇಶಕಾಂಡ 24:17. [2]1 ಅರಸು 17:19ನ್ನು ನೋಡಿರಿ. [3]J. R. MacDuff, *ಬೆಂಕಿಯ ಪ್ರವಾದಿ ಎಲೀಯ* (Grand Rapids, Mich.: Booker Book House, 1956), 59. [4]ಕಳೆದ ಸಾರಿ ನಾನು ಈ ಪುಸ್ತಕವನ್ನು ಪರೀಕ್ಷಿಸಿದಾಗ ಅದು ನಿಜವಾಗಿಯೂ *Europe on $45 a Day* ಎಂದು ಕರೆಯಲ್ಪಡುತ್ತಿತ್ತು! [5]ಆ ಸಂಗೀತದ ದಾಟಿಯು "Sugar in the Morning." [6]ಈ ಚಿಕ್ಕ ಗೀತವು "Jesus Loves Me" ಎಂಬ ದಾಟಿಯಲ್ಲಿ ಹಾಕಲ್ಪಡುತ್ತದೆ.

---

## ಪಾಠದ ರೂಪರೇಖೆ

**ಪರಿಚಯ**

A. ಬೈಬಲಿನಲ್ಲಿ ಯಾವಾಗಲೂ ಬಳಸಲಾದ ಉದಾಹರಣೆಯು ಬೆಂಕಿಯ ಮೂಲಕ ಹಾದು ಹೋಗುವದು ಎಂಬುದೇ. ಬೆಂಕಿಯ ಮೂಲಕ ಹಾದು ಹೋಗುವದು ಭಯಯುಕ್ತವಾದ ಅನುಭವವಾಗಿದೆ, ಆದರೆ ಬೆಂಕಿಯಿಂದ ಬದುಕಿದವರು ಬಲಶಾಲಿಗಳು ಮತ್ತು ಬಹು ಮೌಲ್ಯವುಳ್ಳವರೂ ಆಗಿರುತ್ತಾರೆ.
   1. ಇದು ಯಾವುದೇ ಸಂಗತಿಯು ಬೆಂಕಿಯ ಮೂಲಕ ಹಾದು ಹೋಗುತ್ತಿರುವುದರ ಅದು ಮನೆ. ಯಾವುದು ಇದರ ಮೂಲಕವಾಗಿ ಕೊನೆಯಲ್ಲಿ ಉಳಿದುಕೊಳ್ಳುತ್ತದೆಯೋ ಅದು ಗಟ್ಟಿಯಾದ ಮನೆಯಾಗಿರುತ್ತದೆ.
   2. "ಚಾರೆಪ್ತಾ" ಇದರ ಅರ್ಥವು "ಕುಲಿಮೆ" ಅಥವಾ "ಬೆಂಕಿ" ಆಗಿದೆ.
      a. ಚಾರೆಪ್ತಾವು ಎಲೀಯನಿಗೋಸ್ಕರ ಕುಲಿಮೆಯಾಗಿತ್ತು.
      b. ವಿಶೇಷವಾಗಿ ಚರಪ್ತಾದ ವಿಧವೆಗೆ ಬೆಂಕಿಯಾಗಿತ್ತು.

B. ಈ ಪಾಠದಲ್ಲಿ ಚಾರೆಪ್ತಾದಲ್ಲಿನ ವಿಧವೆಯನ್ನು ದೇವರು ಹೇಗೆ ಆಶೀರ್ವದಸಿದನೆಂದು ಮತ್ತು ನಮ್ಮ ಮನೆಯನ್ನು ಹೇಗೆ ಆಶೀರ್ವದಿಸುವನೆಂದು ನಾವು ಗಮನಿಸಿದ್ದೇವೆ.

I. ಪರಲೋಕದ ಆಸಕ್ತಿ ವಹಿಸುವಿಕೆ
   A. ನಮ್ಮ ಕಥೆಯ ಕಡೆಗೆ ತಿರುಗಿಕೊಳ್ಳೋಣ.
      1. ಕೆರೀತ್ ಹಳ್ಳವು ಒಣಗಿದ ನಂತರ, ದೇವರು ಎಲೀಯನನ್ನು ಚಾರೆಪ್ತಾಕ್ಕೆ ಕಳುಹಿಸಿದನು (1 ಅರಸು 17:8-10).
      2. ಆತನು ಅಲ್ಲಿಗೆ ಹೋದಾಗ, ದೇವರು ಎಲೀಯನಿಗೆ ತಿಳಿಸಿದ ಆ ವಿಧವೆಯು ಸಾಯುವುದಕ್ಕೆ ಸಿದ್ಧವಾಗುತ್ತಿದ್ದಳು (1 ಅರಸು 17:10, 12)!
   B. ಈ ಪಾಠದಲ್ಲಿರುವ ವಿಧವೆಯತ್ತ ದೃಷ್ಟಿ ಹರಿಸೋಣ.
      1. ಅವಳ ಜೀವನದಲ್ಲಿ ಎಲ್ಲವೂ ತಪ್ಪಾಗಿಯೇ ನಡೆಯುತ್ತಿತ್ತು!
      2. ಪರಲೋಕವು ತಿಳಿದಿರುತ್ತದೆ ಮತ್ತು ಪರಲೋಕವು ಕಾಳಜಿವಹಿಸುತ್ತದೆ!
         a. ಪರಲೋಕವು ಎಲ್ಲಾ ವಿಧವೆಯರ ಬಗೆಗೆ ಕರುಣಿಸುವುದಾಗಿದೆ (ವಿಮೋಚನಕಾಂಡ 22:22; ಧರ್ಮೋಪದೇಶಕಾಂಡ 14, 16, 24, 26; ಲೂಕ 7:12; ಯಾಕೋಬ 1:27).
         b. ಪರಲೋಕವು ನಿರ್ದಿಷ್ಟವಾಗಿ ಈ ವಿಧವೆಯ ಮೇಲೆ ಕರುಣೆಯನ್ನು ಚೆಲ್ಲಿತ್ತು (ಲೂಕ 4:25, 26).

C. ನಿನ್ನ ಮನೆಯಲ್ಲಿ ನೀನು ಯಾವುದೇ ಸಮಸ್ಯೆ ಮೂಲಕ ಹಾದು ಹಾಗುತ್ತಿರುವಾಗ ಪರಲೋಕವು ತಿಳಿದಿರುತ್ತದೆ ಮತ್ತು ಪರಲೋಕಕ್ಕೆ ಅದರ ಚಿಂತೆ ಇರುತ್ತದೆ!

II. ಪರಲೋಕದ ಶರತ್ತುಗಳು. ಪರಲೋಕವು ಈ ಮನೆಗೆ ಸಹಾಯ ಮಾಡುವುದಾಗಿದೆ:

A. ಇದೊಂದು ಕೊಡುವ ಮನೆಯಾಗಿದೆ (1 ಅರಸು 17:10, 11; ನೋಡಿರಿ ಮತ್ತಾಯ 10:41, 42).

B. ಇದೊಂದು ನಂಬಿಕೆಯ ಮನೆಯಾಗಿದೆ (1 ಅರಸು 17:12; ನೋಡಿರಿ ಮತ್ತಾಯ 15:22-28; ಕೀರ್ತನೆ 37:5).

C. ಇದೊಂದು ವಿಧೇಯತೆಯ ಮನೆಯಾಗಿತ್ತು (1 ಅರಸು 17:11-15).

D. ಇದೊಂದು ನಿಸ್ವಾರ್ಥವಾದ ಮನೆಯಾಗಿತ್ತು (ನೋಡಿರಿ ಮಾರ್ಕ 12; ಫಿಲಿಪ್ಪಿ 2:3).

III. ಪರಲೋಕದ ಬದ್ಧತೆ

A. ಎಲೀಯನು ಚಾರೆಪ್ತಾದ ವಿಧವೆಗೆ ಮೊದಲು ಆತನಿಗೆ ರೊಟ್ಟಿಯನ್ನು ಮಾಡಲು ಹೇಳುವಾಗ (1 ಅರಸು 17:14).

1. ದೇವರು ಆ ಬದ್ಧತೆಗಳನ್ನು ಗೌರವಿಸುವವನಾಗಿರುತ್ತಾನೆ (1 ಅರಸು 17:15, 16).

2. ಅವರ ಆಹಾರ ಕ್ರಮದಲ್ಲಿ ಯಾವ ವೈವಿದ್ಯತೆಯು ಇರಲಿಲ್ಲ, ಆದರೆ ಇದು ಆ ವಿಧವೆಗೆ ಮಹತ್ವದ ಸಂಗತಿಯಾಗಿರಲಿಲ್ಲ. ಈಗ ಅವಳ ಕುಟುಂಬವು ಕಾಳಜಿ ಮಾಡಲ್ಪಟ್ಟಿತ್ತು! ನಮಗೆ ಬೇಕಾದುದನ್ನು ಪಡೆದುಕೊಳ್ಳುವದು ದೊಡ್ಡ ಆಶೀರ್ವಾದವಲ್ಲ ಆದರೆ ನಮಗೆ ಅತ್ಯವಶ್ಯ ಇರವುದನ್ನು ಪಡೆದುಕೊಳ್ಳುವದು ನಿಜವಾಗಿಯೂ ಆಶೀರ್ವಾದವಾಗಿದೆ.

B. ನಾವು ಮಾತನಾಡುತ್ತಿರುವಂತಹ ಕ್ರೈಸ್ತರಲ್ಲಿ ನೀನೂ ಒಬ್ಬನಾಗಿದ್ದರೆ ಮತ್ತು ಕರುಣೆಯುಳ್ಳ ಮನುಷ್ಯನು ಆಗಿದ್ದರೆ, ದೇವರೂ ಸಹ ಕೆಲ ನಿಶ್ಚಿತ ಒಡಂಬಡಿಕೆಗಳನ್ನು ನಿನಗೂ ನಿನ್ನ ಮನೆಗೂ ಮಾಡುವವನಾಗಿದ್ದಾನೆ.

1. ದೇವರ ವಾಗ್ದಾನಗಳಲ್ಲಿ ಅನೇಕವು ಲೂಕ 6:35, 38; ಮತ್ತಾಯ 25:34, 35, 40ರಲ್ಲಿ ಆತನು ವಿಧವೆಗೆ ಮಾಡಿದ ವಾಗ್ದಾನಗಳಿಗೆ ಸಮಾನವಾಗಿವೆ. ಮನೆಯ ದಿನನಿತ್ಯದ ವಿಚಾರಕ್ಕೆ ಬಂದರೆ. ನಾವು ಮತ್ತಾಯ 6:33ರನ್ನು ಹೊಂದಿದ್ದೇವೆ.

2. ಇಂದು ನಮಗಾಗಿ ದೇವರ ಒದಗಿಸುವಿಕೆಯು ಎಲೀಯನ ಸಮಯದಲ್ಲಿದ್ದಂತೆ ಅದ್ಭುತೀಯವಾದವುಗಳಲ್ಲ, ಆದರೆ ಅವುಗಳು ಇನ್ನೂ ನೈಜವಾದವುಗಳು ಆಗಿವೆ. ದೇವರು ಇನ್ನೂ ತನ್ನ ಜನರನ್ನು ಲಕ್ಷಿಸುವವನಾಗಿದ್ದಾನೆ (ಯೆಶಾಯ 41:10)!